ರಾಜ್ಯದಲ್ಲಿ ಆಗ್ಮೆ ಜಮೀನು ಖಾಯಂಗೊಳಿಸುವ ಬಗ್ಗೆ

೮೦೭ (೧೫೬೮) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ರಾಜ್ಯದಲ್ಲಿರುವ ಆಗ್ಮೆ ದರಖಾಸ್ತುದಾರರ ಸಂಖ್ಯೆ ಎಷ್ಟು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮಂಜೂರಾಗಿದೆ ?

ಆ) ಈ ಆಗ್ಮೆ ದರಖಾಸ್ತುದಾರರು ಹೊಂದಿರುವ ಆಗ್ಮೆ ಜಮೀನನ್ನು ಅವರಿಗೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಕೆ.ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು),—

ಅ) ದಿನಾಂಕ ೧-೧-೧೯೮೮ರವರೆಗೆ ರಾಜ್ಯದಲ್ಲಿರುವ ಆಗ್ಮೆ ದರಖಾಸ್ತುದಾರರ ಸಂಖ್ಯೆ ೩,೭೩.೮೪೬ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಈ ತರಹ ಜಮೀನನ್ನು ಮಂಜೂರು ಮಾಡಿರುವುದಿಲ್ಲ.

ಆ) ಪರಿಶೀಲನೆಯಲ್ಲಿವೆ.

ಆಸ್ಪತ್ರೆಗಳಲ್ಲಿರುವ ಹೈಪವರ್ ಕಮಿಟಿಗಳನ್ನು ರದ್ದುಪಡಿಸುವುದರ ಬಗ್ಗೆ

೮೦೯ (೩೦೧) ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಕಾರ್ಮಿಕ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಇ.ಎಸ್.ಐ. ಆಸ್ಪತ್ರೆಗಳಲ್ಲಿ ಔಷದಿಗಳನ್ನು ಖರೀದಿಸುವುದಕ್ಕಾಗಿ ಹೈಪವರ್ ಸಮಿತಿಗಳು ಇರುವುದು ನಿಜವೇ ?

ಆ) ಈ ಸಮಿತಿಗಳ ಕಾರ್ಯ ತೃಪ್ತಿಕರವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಸಮಿತಿಗಳನ್ನು ಸರ್ಕಾರವು ರದ್ದು ಪಡಿಸಿ ಪರ್ಯಾಯ ವ್ಯವಸ್ಥೆ ಮಾಡುವುದೆ ?

ಶ್ರೀ ಕೆ.ಹೆಚ್. ಪಾಟೀಲ್ (ಕಾರ್ಮಿಕ ಮತ್ತು ಕಂದಾಯ ಸಚಿವರು).—

ಅ) ಸರ್ಕಾರದ ಮಟ್ಟದಲ್ಲಿ ಒಂದು ಹೈಪವರ್ ಸಮಿತಿ ಇರುತ್ತದೆ.

ಆ) ಬಂದಿಲ್ಲ

ಇ) ಈ ಸಮಿತಿಯ ಕಾರ್ಯವು ತೃಪ್ತಿಕರವಾಗಿದ್ದು ಪುನಃ ೨-೪-೯೦ ರಿಂದ ಎರಡು ವರ್ಷಗಳ ವರೆಗೆ ಮುಂದುವರಿಸಲಾಗಿದೆಯಾದುದರಿಂದ ರದ್ದುಪಡಿಸುವ ವಿಚಾರ ಇಲಾಖೆಗೆ ಇಲ್ಲ.

ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಲಭ್ಯ

೮೬ (೩೦೦) ಶ್ರೀ ಎ. ಕೃಷ್ಣಪ್ಪ, (ವರ್ತೂರು).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ರಾಜ್ಯದಲ್ಲಿ ಸುಮಾರು ೬ಲಕ್ಷ ಮಂದಿ ನೌಕರರು ಇ.ಎಸ್.ಐ. ಸೌಲಭ್ಯಕ್ಕಾಗಿ ನೊಂದಾಯಿತರಾಗಿದ್ದು ಈಗಿರುವ ಸೌಲಭ್ಯ ಸಾಕಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು ೨ಲಕ್ಷದ ೪೦ಸಾವಿರ ಕಾರ್ಮಿಕರು ಇ.ಎಸ್.ಐ. ಸೌಲಭ್ಯಕ್ಕಾಗಿ ನೊಂದಾಯಿತರಾಗಿದ್ದು ಅವರಿಗೆ ಈಗಿರುವ ಸೌಲಭ್ಯ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ವೈದ್ಯರು, ಔಷಧಿ ಸಿಬ್ಬಂದಿ ಹಾಗೂ ಕಟ್ಟಡದ ಕೊರತೆಯನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?